**Code No. 01**

Total No. of Questions : 55 ] [ Total No. of Printed Pages : 7

## March, 2009

# KANNADA

Time : 3 Hours 15 Minutes ] [ Max. Marks : 100

### ಅ– ವಿಭಾಗ

I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 10 × 1 = 10

1) ಭೀಮನು ಈಗಾಗಲೇ ಯಾರ ರಕ್ತದ ಸವಿಯನ್ನು ನೋಡಿದ್ದಾನೆ ?

2) ಕವಿದ ಕತ್ತಲೆಯೊಳಗೆ ಚಂದ್ರಮತಿ ಹೇಗೆ ನಿಂತಿದ್ದಳು ?

3) ಯಾವ ಸತಿಪತಿಗಳು ಸಂಸಾರದ ಸುಗ್ಗಿಯನ್ನು ಅನುಭವಿಸುವರು ?

4) ಬಿಳಿಯ ಬಟ್ಟೆ ಎಲ್ಲಿಂದ ಬಂದದ್ದು ?

5) ಕುವೆಂಪುರವರು ವಿಜ್ಞಾನವನ್ನು ಏನೆಂದು ಭಾವಿಸಿದ್ದರು ?

6) ಟ್ಯಾಕ್ಸಿ ಡ್ರೈವರನನ್ನು ಲೇಖಕರು ಯಾರಿಗೆ ಹೋಲಿಸುತ್ತಾರೆ ?

7) ಸುಧಾಮೆ ಯಾರ ಮಗಳು ?

8) ಬೇಡರಿಗೆ ಬಿಲ್ಲು ವಿದ್ಯೆ ಏನಾಗಿದೆ ?

9) ಬಿಲ್ಲು ವಿದ್ಯೆಯನ್ನು ಯಾವುದಕ್ಕಾಗಿ ಬಳಸಿಕೊಳ್ಳಬಹುದೆಂದು ಅಶ್ವತ್ಥಾಮ ಹೇಳುತ್ತಾನೆ ?

10) ಯುದಿಷ್ಠಿರನ ದೃಷ್ಟಿಯಲ್ಲಿ ನಿಜವಾದ ದುಷ್ಟತನ ಯಾವುದು ?

CAREERINDIA



## ಆ – ವಿಭಾಗ

II. ಅ) ಕೆಳಗಿನ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

$4 \times 2 = 8$

11) ಕಾಯಕವನ್ನು ಹೇಗೆ ಮಾಡಬೇಕೆಂದು ಲಕ್ಕಮ್ಮ ಹೇಳುತ್ತಾಳೆ ?

12) ಹೊಟ್ಟೆಪಾಡಿಗಾಗಿ ಜನರು ಯಾವ ಯಾವ ಮಾರ್ಗಗಳನ್ನು ಹಿಡಿಯುತ್ತಾರೆ ?

13) ಪತಿಯ ಸುಖದುಃಖಗಳಿಗೆ ಪತ್ನಿ ಹೇಗೆ ಸ್ಪಂದಿಸುತ್ತಾಳೆ ?

14) ಕ್ರೈಸ್ತ, ಬುದ್ಧ, ಮಹಾವೀರರು ಎಲ್ಲಿದ್ದಾರೆಂದು ಕವಿ ಹೇಳಿದ್ದಾನೆ ?

15) ಪೆಟ್ರೊಮ್ಯಾಕ್ಸ್ ಹೊತ್ತವರ ಇಂದಿನ ಸ್ಥಿತಿ ಹೇಗಿದೆ ?

ಆ) ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

$3 \times 2 = 6$

16) ಫಾತಿಮಾ ಜೊಹರಾ ತಾಯಿಗೆ ಏನು ಹೇಳುವಳು ?

17) ವಚನಕಾರರು ಸ್ವಂತಿಕೆಯನ್ನು ಹೇಗೆ ಕಾಪಾಡಿಕೊಂಡರು ಎಂದು ಡಿ.ಆರ್. ನಾಗರಾಜುರವರು ಹೇಳಿದ್ದಾರೆ ?

18) ಮರಿಸ್ಸಾ ಹುಟ್ಟಿದ ತಕ್ಷಣ ಬೋನ್ ಮ್ಯಾರೋ ವರ್ಗಾವಣೆ ಮಾಡಲು ಏಕೆ ಸಾಧ್ಯವಿರಲಿಲ್ಲ?

19) ಸುಮತಿಯು ಕಳ್ಳನನ್ನು ಪತ್ತೆ ಮಾಡಿದ ನಂತರ ಏನು ಮಾಡಿದಳು ?

www.careerindia.com

CAREERINDIA



ಇ) ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

$3 \times 2 = 6$

20) ಹೆಚ್ಚು ವಿದ್ಯೆ ಕಲಿಯಲು ತಾಯಿ ಏಕಲವ್ಯನಿಗೆ ನೀಡುವ ಸಲಹೆ ಯಾವುದು ?

21) 'ಅಸಮಾನತೆ ನಿಸರ್ಗ ಸಹಜ' ಎಂದು ದ್ರೋಣಾಚಾರ್ಯ ಹೇಳುವ ಬಗೆ ಯಾವುದು ?

22) ಕಾಡಿನ ವೀರ ಏಕಲವ್ಯನನ್ನು ಕುರಿತು ದುರ್ಯೋಧನನ ಅಭಿಪ್ರಾಯವೇನು ?

23) ಯುದ್ಧದ ತಂತ್ರವನ್ನು ಕೃಷ್ಣ ವಿವರಿಸಿದ್ದು ಹೇಗೆ ?

## ಇ - ವಿಭಾಗ

III. ಅ) ಕೆಳಗಿನ ಯಾವುದಾದರೂ **ಎರಡು** ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯಗಳನ್ನು ಬರೆಯಿರಿ : $2 \times 3 = 6$

24) ತತ್ಸರೋವರದೆರ್ದೆ ಪವ್ವನೆ ಪಾಱುವಂತೆ ಪಾಱಿದುವು.

25) ನಿನ್ನಂ ನೋಡಿ ಮಱೆತು ಪರಿಣಾಮವಂ ಧರಿಸುತಿಪ್ಪೆನ್.

26) ಸುಳ್ಳು ಬೊಗಳಿ ತಿಂಬುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ.

ಆ) ಕೆಳಗಿನ ಯಾವುದಾದರೂ **ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ :

$1 \times 3 = 3$

27) ದೇವರು ಯಾವ ರೂಪದಲ್ಲಿ ಬಂದರೆ ನಿಮಗೆ ಗೊತ್ತಾಗುತ್ತದೆ ?

28) ಅಯ್ಯೋ ಮಗಳೇ, ನೀನು ಹೋಗೇಬಿಟ್ಟೆಯಾ ?

[ Turn over

www.careerindia.com

CAREERINDIA



ಇ) ಕೆಳಗಿನ ಯಾವುದಾದರೂ **ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

29) ಬಿಲ್ಲು ವಿದ್ಯೆ ಬೇಡರ ಹುಟ್ಟುಗುಣ.

30) ನನ್ನನ್ನು ಮೀರಿಸಿದ ಬಿಲ್ಲುಗಾರನಾಗಿದ್ದೀಯೆ.

## ಈ – ವಿಭಾಗ

IV. ಅ) ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

31) 'ವರ್ಣ ಮೈತ್ರಿ ಅನಿವಾರ್ಯ' ಎಂಬ ವಿಶ್ವತತ್ವ ಕವಿತೆಯಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿ.

32) ಭೀಮನಲ್ಲಿ ಬರುತ್ತಿರುವ ಹಳೆಯ ನೆನಪುಗಳು ಯಾವುವು ?

33) ಎಲುಬಿನ ಹಂದರದೊಳಗೆ ಕವನ ಮತಧರ್ಮಕ್ಕೂ ಮಾನವ ಧರ್ಮಕ್ಕೂ ಇರುವ ಸಂಬಂಧವನ್ನು ಹೇಗೆ ಚಿತ್ರಿಸಿದೆ ? ವಿವರಿಸಿ.

34) ಪೆಟ್ರೊಮ್ಯಾಕ್ಸ್ ಹೊತ್ತವರ ದುಃಸ್ಥಿತಿಯನ್ನು ಕವಿ ಹೇಗೆ ಪರಿಚಯಿಸುತ್ತಾರೆ ?

ಆ) ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

35) ಗಂಡ ನೀಡಿದ ತಲಾಖ್ ಕುರಿತು ಜೊಹರಾ ಹೇಗೆ ಚಿಂತಿಸುತ್ತಾಳೆ ?

36) ಸಂಸ್ಕೃತಿ ಹಾಗೂ ರಾಜಕೀಯ ಕುರಿತಂತೆ ನೀಷೆಯ ವಿಚಾರಗಳು ಯಾವುವು ?

37) ಸುಮತಿಯು ಕಳ್ಳನನ್ನು ಪತ್ತೆ ಮಾಡಲು ಹೇಳಿದ ಕಥೆಯ ಸ್ವಾರಸ್ಯವೇನು ?

www.careerindia.com

CAREERINDIA



ಇ) ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 2 × 4 = 8

38) ಕುರುಡ ರಾಜನ ಪ್ರಶ್ನೆಗೆ ಹಾಡುಗಾರರು ಹೇಗೆ ಉತ್ತರಿಸಿದ್ದಾರೆ ? ವಿವರಿಸಿ.

39) ದ್ರೋಣಾಚಾರ್ಯರು ಅರ್ಜುನನಿಗೆ ನೀಡಿದ ವಚನ ಯಾವುದು ? ಅದನ್ನು ಉಳಿಸಿಕೊಳ್ಳಲು ಅವರು ಏನು ಮಾಡಿದರು ?

40) ಏಕಲವ್ಯನನ್ನು ಕೌರವರತ್ತ ಸೆಳೆಯಲು ಕರ್ಣನು ಹೇಗೆ ಪ್ರಯತ್ನಿಸಿದನು ? ವಿವರಿಸಿ.

## ಉ – ವಿಭಾಗ

V. ಅ) ಕೆಳಗಿನ ಯಾವುದಾದರೂ **ಒಂದು** ಪದ್ಯದ ಭಾವಾರ್ಥವನ್ನು ಬರೆಯಿರಿ : 1 × 5 = 5

41) ''ನೋಡುತ್ತಿದ್ದೇನೆ ಸುತ್ತಲೂ ಎಂತೆಂಥವೋ
ವಿಜೃಂಭಿಸಿ ಮೀಸೆ ತಿರುವುತ್ತವೆ
ಏರಬಾರದ ಕಡೆಗೆ ಏರಿ ಇಳಿಯಬಾರದ ಕಡೆಗೆ
ಇಳಿದು ಕೆಡಿಸಿ ಹೊಲಸೆಬ್ಬಿಸಿವೆ.''

ಅಥವಾ

42) ''ಹಿಡಿಯಷ್ಟಿರುವ ತಂಗಿಯನು
ಮುಡಿಯಷ್ಟಿರುವ ಅಕ್ಕ
ಅಕ್ಕರೆಯಿಂದ ಅಪ್ಪುವಳು
ಅಭಯ ನೀಡುವಳು.''

ಆ) **ಭಾಷಾಭ್ಯಾಸ**

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಆರಕ್ಕೆ** ಆಯಾ ಸೂಚನೆಗೆ ಅನುಗುಣವಾಗಿ ಉತ್ತರ ಬರೆಯಿರಿ : 6 × 2 = 12

43) ಈ ಪದಗಳಿಗೆ ತತ್ಸಮಗಳನ್ನು ಬರೆಯಿರಿ :
ಹರಣ, ಬಣ್ಣ.

[ Turn over

www.careerindia.com

CAREERINDIA



44) ಈ ಪದಗಳ ಕ್ರಿಯಾಧಾತುಗಳನ್ನು ಬರೆಯಿರಿ :

ಹೋದೆವು, ಮಾಡುವೆ.

45) ಈ ಪದಗಳಿಗೆ ವಿಭಕ್ತಿಯನ್ನು ಬರೆಯಿರಿ :

ಇಳೆಯಲ್ಲಿ, ಆಭರಣಗಳನ್ನು.

46) ಈ ಪದಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ಕಾಂತಾರ, ನಿಷಾದ.

47) ಈ ಪದಗಳ ಗುಣವಾಚಕಗಳನ್ನು ಬರೆಯಿರಿ :

ಸೂಳ್ನುಡಿ, ಮರಗಟ್ಟು.

48) ದ್ವಿರುಕ್ತಿಗಳಿಗೆ ಎರಡು ಉದಾಹರಣೆ ಕೊಡಿ.

49) ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ :

ಹಿತ್ತಾಳೆ ಕಿವಿ, ಕೈಚಳಕ.

ಇ) ಕೆಳಗಿನ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧವನ್ನು ಬರೆಯಿರಿ : $1 \times 5 = 5$

50) ಸಾಂಸ್ಕೃತಿಕ ಚಟುವಟಿಕೆಗಳು

51) ನಿತ್ಯ ಜೀವನದಲ್ಲಿ ಯೋಗಾಭ್ಯಾಸದ ಅವಶ್ಯಕತೆ.

www.careerindia.com

CAREERINDIA



ಈ) **ಪತ್ರಲೇಖನ**

ಈ ಕೆಳಗಿನ ಯಾವುದಾದರೂ **ಒಂದನ್ನು** ಕುರಿತು ಪತ್ರ ಬರೆಯಿರಿ : 1 × 4 = 4

52) ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ಕೋರಿ ನಿಮ್ಮ ತಂದೆಗೆ ಪತ್ರ ಬರೆಯಿರಿ.

53) ಒಂದು ವಾರ ಕಾಲದ ರಜೆ ಕೋರಿ ನಿಮ್ಮ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ.

ಉ) ಈ ಕೆಳಗಿನ ಗಾದೆಗಳಲ್ಲಿ **ಒಂದನ್ನು** ವಿಸ್ತರಿಸಿ ಬರೆಯಿರಿ : 1 × 4 = 4

54) ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ.

55) ಆಯ ನೋಡಿ ಪಾಯ ಹಾಕು.

www.careerindia.com